ಆ) ಯೋಜನೆಯ ಫಲಾನುಭವಿಗಳಿಗೆ ವಿಧಿಸಿರುವ ಅರ್ಹತೆ ಮತ್ತಿತರ ವಿವರಗಳೇನು;

ಇ) ರಾಜ್ಯದಾದ್ಯಂತ ಯೋಜನೆಯನ್ನು ಜಾರಿಗೊಳಿಸಲಾಗಿದೆಯೇ; ಇಲ್ಲವಾದಲ್ಲಿ, ಕಾರಣಗಳೇನು; ಎಲ್ಲಾ ಅರ್ಹ ನಾಗರೀಕರಿಗೆ ಯೋಜನೆಯ ಸೌಲಭ್ಯವನ್ನು ಒದಗಿಸಿಕೊಡಲು ಸರಕಾರದ ಕ್ರಮಗಳೇನು?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಮತ್ತು ಆ) ಗುಲ್ಬರ್ಗಾ ಕಂದಾಯ ವಿಭಾಗದ ಬೀದರ್, ಗುಲ್ಬರ್ಗಾ, ರಾಯಚೂರು, ಕೊಪ್ಪಳ, ಯಾದಗೀರ್, ಬಳ್ಳಾರಿ ಈ 6 ಜಿಲ್ಲೆಗಳಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬದವರಿಗೆ ಮಾರಣಾಂತಕ ಕಾಯಿಲೆಗಳ ಚಿಕಿತ್ಸೆಗಾಗಿ "ವಾಜಪೇಯಿ ಆರೋಗ್ಯಶ್ರೀ" ಎಂಬ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದ್ದು, ಅದರಡಿ ಪ್ರತಿ ಕುಟುಂಬಕ್ಕೆ ಫ್ಯಾಮಿಲಿ ಪೋಟರ್ ಆಧಾರದ ಮೇಲೆ ರೂ.1.50 ಲಕ್ಷಗಳಿಂದ ರೂ.2.00 ಲಕ್ಷಗಳವರೆಗೆ ಗುರುತಿಸಲ್ಪಟ್ಟ ಸರ್ಕಾರಿ/ಖಾಸಗಿ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸಾ ಸೌಲಭ್ಯ ಪಡೆಯಲು ಅವಕಾಶ ಕಲ್ಪಿಸಲಾಗಿದೆ.

ಇ) ಮೇಲೆ ತಿಳಿಸಿದಂತೆ ಗುಲ್ಬರ್ಗಾ ಕಂದಾಯ ವಿಭಾಗದ 6 ಜಿಲ್ಲೆಗಳಲ್ಲಿ ಈ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದ್ದು, ರಾಜ್ಯದ ಇತರೆ ವಿಭಾಗಗಳಿಗೆ ಹಂತ–ಹಂತವಾಗಿ ವಿಸ್ತರಿಸಬೇಕಾಗುತ್ತದೆ.

ಅಸಂಘಟಿತ ಕಾರ್ಮಿಕರ ಭದ್ರತಾ ಮಂಡಳಿ

865 (1483) ಶ್ರೀ ಹ್ಯಾರೀಸ್ ಎನ್.ಎ. (ಶಾಂತಿನಗರ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಸಂಘಟಿತ ಕಾರ್ಮಿಕರ ಹಿತರಕ್ಷಣೆಗಾಗಿ ಅಸ್ತಿತ್ವಕ್ಕೆ ಬಂದ ಭದ್ರತಾ ಮಂಡಳಿಯ ಕುರಿತು ವಿವರಗಳೇನು; ಅಸಂಘಟಿತ ಕಾರ್ಮಿಕರಿಗೆ ಭದ್ರತೆಯನ್ನು ಒದಗಿಸಿಕೊಡುವ ಪ್ರಮುಖ ಅಂಶಗಳೇನು;

ಆ) ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ಮೂಲಕ ಸರ್ಕಾರ ಅನುಷ್ಠಾನಗೊಳಿಸಲಿರುವ ಕಲ್ಯಾಣ ಕಾರ್ಯಕ್ರಮಗಳೇನು;

ಇ) ಅಸಂಘಟಿತ ವಲಯದ ಕಾರ್ಮಿಕರುಗಳ ಸಂರಕ್ಷಣೆಗಾಗಿ ಪ್ರಸ್ತುತ ಸರ್ಕಾರ ಜಾರಿಗೊಳಿಸಿರುವ ಕಾರ್ಯ ಕ್ರಮಗಳೇನು?

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು) :

ಅ) ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆ, 2008ರ ಕಲಂ 6(1)ರ ಅನ್ವಯ ರಾಜ್ಯ ಸರ್ಕಾರವು ಕರ್ನಾಟಕ ರಾಜ್ಯ ಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯನ್ನು ರಚಿಸಿರುತ್ತದೆ, ಮಾನ್ಯ ಕಾರ್ಮಿಕ ಸಚಿವರು ಇದರ ಪದನಿಮಿತ್ತ ಅಧ್ಯಕ್ಷರಾಗಿರುತ್ತಾರೆ. ಈ ಮಂಡಳಿಯಲ್ಲಿ ಸರ್ಕಾರದ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ ಇವರು ಪದನಿಮಿತ್ತ ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ. ಇದಲ್ಲದೆ ಮಂಡಳಿಯಲ್ಲಿ 28 ಸದಸ್ಯರು ನೇಮಕಗೊಂಡಿದ್ದು 1) ಏಳು ಸದಸ್ಯರು ಅಸಂಘಟಿತ ಕಾರ್ಮಿಕರನ್ನು ಪ್ರತಿನಿಧಿಸುತ್ತಾರೆ; 2) ಏಳು ಸದಸ್ಯರು ಅಸಂಘಟಿತ ಕಾರ್ಮಿಕರ ಮಾಲೀಕರನ್ನು ಪ್ರತಿನಿಧಿಸುತ್ತಾರೆ; 3) ಇಬ್ಬರು ಸದಸ್ಯರು ವಿಧಾನ ಸಭಾ ಸದಸ್ಯರಾಗಿರುತ್ತಾರೆ; 4) ಐದು ಸದಸ್ಯರು ಸಮಾಜದ ಪ್ರತಿಷ್ಠಿತ ವ್ಯಕ್ತಿ ಗಳಾಗಿರುತ್ತಾರೆ ಮತ್ತು 5) ಏಳು ಸದಸ್ಯರು ರಾಜ್ಯ ಸರ್ಕಾರದ ಇಲಾಖೆ ಗಳನ್ನು ಪ್ರತಿನಿಧಿಸುತ್ತಾರೆ. ಅಸಂಘಟಿತ ಕಾರ್ಮಿಕರಿಗೆ ಸೂಕ್ತ ಸಾಮಾಜಿಕ ಭದ್ರತೆ ಒದಗಿಸುವುದು ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ಉದ್ದೇಶವಾಗಿರುತ್ತದೆ.

ಆ) ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆ 2008ರ ಕಲಂ 3(1)ರ ಅನ್ವಯ ಕೇಂದ್ರ ಸರ್ಕಾರವು ಕೆಳಕಂಡ ಸಾಮಾಜಿಕ ಭದ್ರತೆಗೆ ಸಂಬಂಧಪಟ್ಟಂತೆ ಯೋಜನೆಗಳನ್ನು ಅಸಂಘಟಿತ ಕಾರ್ಮಿಕರಿಗೆ ಹಮ್ಮಿ ಕೊಂಡು ಆಗಿಂದಾಗ್ಗೆ ಅಧಿಸೂಚನೆ ಹೊರಡಿಸುತ್ತದೆ ಇವುಗಳೆಂದರೆ :–

1) ಜೀವ ಮತ್ತು ದೈಹಿಕ ಅಸಮರ್ಥತಾ ಪರಿಹಾರ
2) ಆರೋಗ್ಯ ಮತ್ತು ಹೆರಿಗೆ ಸೌಲಭ್ಯ
3) ವೃದ್ಧಾಪ್ಯ ರಕ್ಷಣೆ
4) ಕೇಂದ್ರ ಸರ್ಕಾರವು ನಿಗಧಿಪಡಿಸುವ ಇತರೆ ಸೌಲಭ್ಯಗಳು.

ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆ, 2008ರ ಕಲಂ 3(4)ರ ಅನ್ವಯ ರಾಜ್ಯ ಸರ್ಕಾರವು ಕೆಳಕಂಡ ಸಾಮಾಜಿಕ ಭದ್ರತೆಗೆ ಸಂಬಂಧಪಟ್ಟಂತೆ ಯೋಜನೆಗಳನ್ನು ಅಸಂಘಟಿತ ಕಾರ್ಮಿಕರಿಗೆ ಹಮ್ಮಿಕೊಳ್ಳ ಬಹುದಾಗಿರುತ್ತದೆ. ಇವುಗಳೆಂದರೆ:–

1) ಪ್ರಾವಿಡೆಂಟ್ ಫಂಡ್
2) ಉದ್ಯೋಗದಲ್ಲಿ ನಿರತವಾಗಿದ್ದಾಗ ಗಾಯಗೊಂಡಲ್ಲಿ ಸೌಲಭ್ಯ
3) ವಸತಿ
4) ಶಿಕ್ಷಣ
5) ಕಾರ್ಮಿಕ ಕುಶಲತೆಯ ಉನ್ನತೀಕರಣ
6) ಶವ ಸಂಸ್ಕಾರಕ್ಕೆ ಸಹಾಯ
7) ವೃದ್ಧಾಶ್ರಮಗಳು

ಇ) ಪ್ರಥಮ ಹಂತದಲ್ಲಿ 1) ದರ್ಜಿಗಳು, 2) ದೋಬಿಗಳು, 3) ಹಮಾಲರು, 4) ಆಟೋ ಮತ್ತು ಟ್ಯಾಕ್ಸಿ ಚಾಲಕರು ಹಾಗೂ 5) ಹೋಟೇಲ್ ಕಾರ್ಮಿಕರನ್ನು ಸಾಮಾಜಿಕ ಭದ್ರತಾ ಯೋಜನೆಯ ಅಡಿಯಲ್ಲಿ ತರಲು ಮಂಡಳಿಯಲ್ಲಿ ತೀರ್ಮಾನಿಸಲಾಗಿದೆ. ಯೋಜನೆಗಳನ್ನು ರೂಪಿಸಲು ವಿಶೇಷ ಸಮಿತಿಯನ್ನು ರೂಪಿಸಲಾಗಿದ್ದು, ಸಮಿತಿಯು ಈ ಐದು ಕ್ಷೇತ್ರದ ಕಾರ್ಮಿಕರ ಮತ್ತು ಮಾಲೀಕರ ಜೊತೆ ಚರ್ಚೆ ನಡೆಸಿದ್ದು,

1) ಅಂತಿಮ ಸಂಸ್ಕಾರದ ಧನಸಹಾಯ, 2) ಶೈಕ್ಷಣಿಕ ಧನ ಸಹಾಯ
2) (ನೊಂದಾಯಿತ ಕಾರ್ಮಿಕರ ಇಬ್ಬರು ಮಕ್ಕಳಿಗೆ),
3) ಅಪಘಾತದಿಂದ ಶಾಶ್ವತ ದುರ್ಬಲತೆ / ಮರಣಕ್ಕೀಡಾದ ನೋಂದಾಯಿತ ಕಾರ್ಮಿಕರಿಗೆ / ಅವರ ಅವಲಂಬಿತರಿಗೆ ಧನಸಹಾಯ,
4) ಭವಿಷ್ಯ ನಿಧಿ ಯೋಜನೆಗಳನ್ನು ಒಳಗೊಂಡ ಕರಡನ್ನು ಸಿದ್ಧಪಡಿಸಿರುತ್ತದೆ. ಅದನ್ನು ಮಂಡಳಿಯ ಅನುಮೋದನೆ ಪಡೆದ ನಂತರ ಅಧಿಸೂಚಿಸಲಾಗುವುದು.

ಸರ್ಕಾರಿ ಆಯುಷ್ ಆಸ್ಪತ್ರೆಗಳು ಚಿಕಿತ್ಸಾಲಯಗಳ ಸ್ಥಿತಿಗತಿ

864 (1482) ಶ್ರೀ ಹ್ಯಾರೀಸ್ ಎಸ್.ಎ. (ಶಾಂತಿನಗರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಒಟ್ಟು ಆಯುಷ್ ಮತ್ತು ಚಿಕಿತ್ಸಾಲಯಗಳ ಸಂಖ್ಯೆ ಎಷ್ಟು;